**PW- 1**

**ದಿನಾಂಕಃ 15-11-2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 2 ನೇ ಎದುರುದಾರರ ಶ್ರೀ ಎನ್ ಎಂ ಎಲ್ ಪರ ವಕೀಲರಿಂದಃ**

1. ನಾನು ಪ್ರಥಮ ಚಿಕಿತ್ಸೆ ಪಡೆದುಕೊಂಡ ನಂತರ ಮನೆಯಲ್ಲಿ ಇದ್ದು ನಂತರ ಬೇರೆ ಆಸ್ಪತ್ರೆಗೆ ಹೋಗಿರುತ್ತೇನೆ. ನಾನು ಪ್ರಥಮ ಚಿಕಿತ್ಸೆ ಪಡೆದ ನಂತರ 3 ದಿನ ಬಿಟ್ಟು ಬೇರೆ ಆಸ್ಪತ್ರೆಗೆ ಹೋಗಿರುತ್ತೇನೆ ಎಂದರೆ ಸರಿಯಲ್ಲ. ಕೇವಲ 2 ದಿನ ಬಿಟ್ಟು ಹೋಗಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ಪಿರ್ಯಾದಿಯಲ್ಲಿ ನನ್ನ ಎದುರಿನಿಂದ ಯಾವ ವಾಹನ ಬತ್ತು ಎಂದು ತೋರಿಸಿಲ್ಲ ಎಂದರೆ ನಿಜ. ನ್ಯಾಯಾಲಯಕ್ಕೆ ಸ್ಥಳ ಪಂಚನಾಮೆ ಜೊತೆ ಇರುವ ನಕ್ಷೆ ಹಾಜರು ಪಡಿಸಲು ಯಾವುದೇ ತೊಂದರೆ ಇಲ್ಲ ಎಂದರೆ ನಿಜ. ನನ್ನ ವೈದ್ಯಕೀಯ ಚಿಕಿತ್ಸೆಗಾಗಿ ರೂ. 3 ಲಕ್ಷ ಖರ್ಚಾಗಿದ್ದು ಮುಂದೆ ವೈದ್ಯಕೀಯ ಖರ್ಚಿಗಾಗಿ 1 ಲಕ್ಷ 25 ಸಾವಿರ ಬೇಕು ಎದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಬೆರಳುಗಳು ಈಗಲೂ ಸಹ ಚಲನ ವಲನ ಇಲ್ಲ.

2. ನನಗೆ ಈಗ ವ್ಯವಸಾಯ ಮಾಡಲು ಯಾವುದೇ ತೊಂದರೆ ಇಲ್ಲ ಎಂದರೆ ಸರಿಯಲ್ಲ. ನನ್ನ ಆದಾಯದ ಮೇರೆಗೆ ನನ್ನ ಕುಟುಂಬ ನಿರ್ವಹಣೆಯಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರದ ಕಂಡಿಕೆ 8 ಮತ್ತು 9 ರಲ್ಲಿ ಬರೆದ ವಿಷಯ ಸುಳ್ಳಿನಿಂದ ಕೂಡಿದೆ ಎಂದರೆ ಸರಿಯಲ್ಲ. ದೂರಿಗೆ ನಾನೇ ಸಹಿ ಮಾಡಿರುತ್ತೇನೆ ಎಂದರೆ ನಿಜ. ನನಗೆ ಅಪಘಾತದಲ್ಲಿ ಗಾಯ ಆಗದೇ ಬೇರೆ ಕಡೆ ಬಿದ್ದು ಸುಳ್ಳು ದೂರು ಸಲ್ಲಿಸಿ ಈಗ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-21 ದಾಖಲೆಯನ್ನು ಖೊಟ್ಟಿ ರೀತಿಯಿಂದ ಬರೆಸಿಕೊಂಡು ಬಂದಿರುತ್ತೇನೆ ಎಂದರೆ ಸರಿಯಲ್ಲ. ಸದರಿ ವಾಹನ ಚಲಾಯಿಸುತ್ತಿದ್ದ ಚಾಲಕನಿಗೆ ಚಾಲನ ಪ್ರಮಾಣ ಪತ್ರ ಮತ್ತು ವಿಮೆ ಇರದ ಕಾರಣ ಎದುರುದಾರರು ಪರಿಹಾರ ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಿಲ್ಲ.

**PW- 1**

3. ನಿಪಿ-12 ಮತ್ತು 13 ದಾಖಲೆಯಲಲ್ಲಿ ನಾನು ಸ್ವತಹ ಬಿದ್ದು ಗಾಯ ಪಡಿಸಿಕೊಂಡಿರುತ್ತೇನೆ ಎಂದು ನಮೂದು ಇದೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ: ಏನೂ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

**(ಓ.ಹೇ.ಕೇ.ಸ.)**

3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಮತ್ತು ಜೆಎಂಎಫಸಿ, ರಾಣೆಬೆನ್ನೂರ.

ಸಾಕ್ಷಿದಾರರ ಸಹಿಃ